ಳ) ತಿಪಟೂರು ಗ್ರಾಮಾಂತರ ಪ್ರದೇಶದ ಸಬ್‌ಇನ್‌ಸ್ಪೆಕ್ಟರ್ ಆಗಿದ್ದ ರಂಗನಾಥ ಅವರು ಅಕ್ರಮವಾಗಿ ಹಣ ಪಡೆದಿದ್ದರ ಬೇರೆಗೆ ಬಂದ ತನಿಖಾ ವರದಿಯನ್ನನುಸರಿಸಿ ಕ್ರಮ ತೆಗೆದುಕೊಳ್ಳುವುದು.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಇಲ್ಲಿಗೆ ಎರಡು ವರ್ಷಗಳ ಹಿಂದೆ ತಿಪಟೂರು ಗ್ರಾಮಾಂತರ ಪೋಲೀಸ್ ಸಬ್‌ಇನ್‌ಸ್ಪೆಕ್ಟರ್ ಆಗಿದ್ದ ರಂಗನಾಥ ಎಂಬುವರು ಕಿಬ್ಬನಳ್ಳಿ ಒಳಿಯ ಮಲ್ಲೇನಹಳ್ಳಿ ಗ್ರಾಮದ ಮೂಡಲಗಿರಿಯಪ್ಪ ಎಂಬ ಗೌರವಾನ್ವಿತ ವ್ಯಕ್ತಿಯನ್ನು ಯಾವ ದೂರು ಇಲ್ಲದೆ ಇದ್ದರೂ ಸಹ ಅಕ್ರಮವಾಗಿ ಪೋಲೀಸ್ ಠಾಣೆಗೆ ಕರೆಸಿ ಹೆದರಿಸಿ ೪೦,೦೦೦ ರೂಪಾಯಿಗಳನ್ನು ಪಡೆದಿದ್ದು, ಈ ಬಗ್ಗೆ ಇಲಾಖೆ ತನಿಖೆ ನಡೆದು ರಿಪೋರ್ಟ್ ಬಂದು ಒಂದು ವರ್ಷವಾದರೂ ಸಹ ಆ ರಿಪೋರ್ಟನ್ನು ಅನುಸರಿಸಿ ಕ್ರಮ ತೆಗೆದುಕೊಂಡಿಲ್ಲ. ಕ್ರಮಕ್ಕೆ ವಿಳಂಬ ಮಾಡಲು ಕ್ಷೇಮವೇ ? ಇನ್ನು ಎಷ್ಟು ದಿವಸದಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಂ. ಪಿ ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಉತ್ತರವನ್ನು ಕೊಡುತ್ತೇನೆ.

ಶ್ರೀ ಡಿ. ರಂಗನಾಥ, ಸಬ್ ಇನ್‌ಸ್ಪೆಕ್ಟರ್‌ರವರು ತಿಪಟೂರು ಗ್ರಾಮಾಂತರ ಠಾಣೆಯಲ್ಲಿ ೧೯೮೫ರಲ್ಲಿ ಕೆಲಸ ಮಾಡುತ್ತಿದ್ದಾಗ, ವಿಧಾನ ಸಭಾ ಸದಸ್ಯರಾದ ಶ್ರೀ ಬಿ. ಲಕ್ಕಪ್ಪನವರು ಒಂದು ಪತ್ರವನ್ನು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರಿಗೆ ಬರೆದು ಅದರಲ್ಲಿ ಶ್ರೀ ರಂಗನಾಥ ಅವರ ಬಗ್ಗೆ ಹಲವು ದೂರುಗಳನ್ನು ಮಾಡಿದ್ದರು. ಈ ದೂರುಗಳ ಬಗ್ಗೆ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್ ರವರು ಪೂರ್ವಭಾವಿ ವಿಚಾರಣೆ ನಡೆಸಿ, ಶ್ರೀ ರಂಗನಾಥ್‌ರವರ ಮೇಲೆ ಮುಂದೆ ಕ್ರಮ ತೆಗೆದುಕೊಳ್ಳಲು ಮೇಲ್ನೋಟಕ್ಕೆ ಸಾಕಷ್ಟು ಕಾರಣಗಳಿವೆಯೆಂದು ತೀರ್ಮಾನಕ್ಕೆ ಬಂದು, ಶ್ರೀ ರಂಗನಾಥರವರ ಮೇಲೆ ಶಿಸ್ತಿನ ಕ್ರಮವನ್ನು ಜರುಗಿಸಲು ಡಿ. ಐ. ಜಿ. ಕೇಂದ್ರ ವಲಯ, ಬೆಂಗಳೂರು ರವರಿಗೆ ವರದಿಯನ್ನು ಕಳುಹಿಸಿದರು. ಡಿ.ಐ.ಜಿ. ಕೇಂದ್ರ ವಲಯ, ಬೆಂಗಳೂರು ರವರು ಶ್ರೀ ರಂಗನಾಥರವರ ಮೇಲೆ ದೋಷಾರೋಪಣ ಪತ್ರವನ್ನು ಹೊರಡಿಸಿ, ಇಲಾಖಾ ವಿಚಾರಣೆಯನ್ನು ಆಜ್ಞೆ ಮಾಡಿದರು. ಈ ಇಲಾಖಾ ವಿಚಾರಣೆಯಲ್ಲಿ ಶ್ರೀ ರಂಗನಾಥರವರ ಮೇಲೆ ಹೂಡಿದ ದೋಷಾರೋಪಣೆಯ ಅಂಶಗಳು ಈ ರೀತಿ ಇವೆ.

೧. ರಂಗನಾಥರವರು, ತಿಪಟೂರು ಗ್ರಾಮಾಂತರ ಪೋಲೀಸ್ ಠಾಣೆಯ ಅಪರಾಧ ಕ್ರಮ ಸಂಖ್ಯೆ. ೩೭-೮೫ರಲ್ಲಿ ನೋಂದಾಣಿಯಾಗಿದ್ದ ಮನೆ ಕನ್ನಗಳ್ಳತನ ಪ್ರಕರಣವನ್ನು ತಪಾಸಣೆ ಮಾಡುವಾಗ ಆರೋಪಿ ಚಂದ್ರಯ್ಯ ಎನ್ನುವವರ ಮುಖಾಂತರ ಮೂಡ್ಲಗಿರಿಯಪ್ಪನವರಿಗೆ ಕಳ್ಳಮಾಲನ್ನು ಕೊಟ್ಟಿದ್ದಾನೆಂದು ಹೇಳಿಸಿ, ಮೂಡ್ಲಗಿರಿಯಪ್ಪನವರಿಂದ ೨೫-೫-೮೫ರಂದು ೪೦,೦೦೦ ರೂ. ಗಳನ್ನು ಪಡೆದು ಹಲವು ಸಾಕ್ಷ್ಯಗಳನ್ನು ಸೃಷ್ಟಿಸಿದರು.

೨. ತಾವು ಮಾಡಿದ ಕಾನೂನು ಬಾಹಿರಕೃತ್ಯದ ಬಗ್ಗೆ ಇರುವ ಸಾಕ್ಷ್ಯಗಳನ್ನು ನಾಶ ಮಾಡಲು ಹಲವು ಕ್ರಮಗಳನ್ನು ತೆಗೆದುಕೊಂಡರು.

ಸದರಿ ವಿಚಾರಣೆಯ ಅಧಿಕಾರಿ ಸಲ್ಲಿಸಿದ ವರದಿಯ ಆಧಾರದ ಮೇಲೆ ಕೇಂದ್ರ ವಲಯದ ಡಿ.ಐ.ಜಿ. ರವರು ೫-೭-೮೭ರಂದು ಕಾರಣ ಕೇಳುವ ಸೂಚನೆಯೊಂದನ್ನು ಹೊರಡಿಸಿ ಸದರಿ ರಂಗನಾಥರವರನ್ನು ವೃತ್ತಿಯಿಂದ ವಜಾ ಮಾಡಬಾರದೇಕೆಂದು ಪ್ರಸ್ತಾಪಿಸಿ ಅವರ ವಿವರಣೆಯನ್ನು ಕೇಳಿದರು.

ಸದರಿ ಸೂಚನೆಗೆ ಶ್ರೀ ರಂಗನಾಥರವರು ತಮ್ಮ ಸಮರ್ಥನೆಯನ್ನು ಲಿಖಿತ ರೂಪದಲ್ಲಿ ಸಲ್ಲಿಸಿ ಅವರ ಪ್ರತಿರಕ್ಷಣಾ ಸಹಾಯಕರೊಡನೆ ತಮ್ಮ ವಾದವನ್ನು ಮೌಖಿಕವಾಗಿಯೂ ಸಹ ಮಂಡಿಸಿದ ಮೇಲೆ ಅದನ್ನು ಗಣನೆಗೆ ತೆಗೆದುಕೊಂಡು ಶ್ರೀ ರಂಗನಾಥ ರವರ ಮೇಲಿರುವ ಆಪಾದನೆಗಳನ್ನು ಪುಷ್ಟೀಕರಿಸಲು ಮಂಡಿಸಿದ ಸಾಕ್ಷ್ಯಗಳಲ್ಲಿ ಅನೇಕ ವಿರೋಭಾಭಾಸಗಳು ಇವೆ ಎಂಬ ಪ್ರಮುಖ ಮತ್ತು ಇನ್ನಿತರ ಕಾರಣಗಳಿಂದ ೨೦-೧೧-೮೮ರಲ್ಲಿ ಹೊರಡಿಸಿದ ತಮ್ಮ ಆಜ್ಞೆಯಲ್ಲಿ ಡಿ.ಐ.ಜಿ, ಕೇಂದ್ರ ವಲಯ, ರವರು ಆರೋಪಿಯನ್ನು ದೋಷ ವಿಮುಕ್ತರಾಗಿ ಮಾಡಿದರು.